**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹತ್ತನೇ ಅಧಿವೇಶನ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-20)**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992ನ್ನು (1994ರ ಕರ್ನಾಟಕ ಅಧಿನಿಯಮ 46) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **3ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992ರ (1994ರ ಕರ್ನಾಟಕ ಅಧಿನಿಯಮ 46) 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಮತ್ತು ಕರ್ನಾಟಕದ ಹೊರಗೆ ತಾನು ಉಚಿತವೆಂದು ಭಾವಿಸುವಂಥ ಸ್ಥಳಗಳಲ್ಲಿ ಸಹ ಕೇಂದ್ರಗಳನ್ನು ಪ್ರಾರಂಭಿಸಬಹುದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯದ ಹೊರಗೆ ವಿಶ್ವವಿದ್ಯಾಲಯವು ಕೇಂದ್ರಗಳನ್ನು ತೆರೆಯುವುದು, ವಿಶ್ವವಿದ್ಯಾಲಯಗಳ ಅಧಿಕಾರವ್ಯಾಪ್ತಿಯ ಕುರಿತು ವಿಶ್ವವಿದ್ಯಾಲಯ ಅನುದಾನಗಳ ಆಯೋಗವು (ಯುಜಿಸಿ) ಹೊರಡಿಸಿರುವ ಸೂಚನೆಗಳಿಗೆ ಮತ್ತು ಸಂವಿಧಾನದ 245ನೇ ಅನುಚ್ಛೇದದ ಉಪಬಂಧಗಳಿಗೆ ವಿರುದ್ಧವಾಗಿರುವುದರಿಂದ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲಿನ ಪ್ರೊ. ಯಶಪಾಲ್ ವಿರುದ್ಧ ಛತ್ತೀಸಗಢ ರಾಜ್ಯ ಈ ಪ್ರಕರಣದಲ್ಲಿ ಇದನ್ನೇ ಪುನರುಚ್ಚರಿಸಿರುವುದರಿಂದ ಸದರಿ ಉಪಬಂಧಗಳನ್ನು ತೆಗೆದು ಹಾಕುವುದಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ, 1992ನ್ನು (1994ರ ಕರ್ನಾಟಕ ಅಧಿನಿಯಮ 46) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಸವರಾಜ್ ರಾಯರೆಡ್ಡಿ**
ಉನ್ನತ ಶಿಕ್ಷಣ ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

### ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992ರ

### (1994ರ ಕರ್ನಾಟಕ ಅಧಿನಿಯಮ 46) ಉದ್ಧೃತ ಭಾಗ

**XX XX XX**

3. **ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ನಿಗಮನ.-** (1) "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ" ಎಂಬ ಹೆಸರಿನಿಂದ ಕರೆಯಲಾಗುವ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾನಿಲಯದ ಕೇಂದ್ರ ಕಾರ್ಯಸ್ಥಾನವು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಇರತಕ್ಕದ್ದು ಮತ್ತು ಅದು ಕರ್ನಾಟಕದಲ್ಲಿ ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಬಹುದು, ನಡೆಸಬಹುದು ಅಥವಾ ಅವುಗಳಿಗೆ ಮಾನ್ಯತೆ ನೀಡಬಹುದು ಮತ್ತು ಕರ್ನಾಟಕದ ಹೊರಗೆ ತಾನು ಉಚಿತವೆಂದು ಭಾವಿಸುವಂಥ ಸ್ಥಳಗಳಲ್ಲಿ ಸಹ ಕೇಂದ್ರಗಳನ್ನು ಪ್ರಾರಂಭಿಸಬಹುದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಪಿ.ಐ. ಕಾಸೂ 329, 1000–ಪ್ರತಿಗಳು 8ನೇ ಜುಲೈ, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**TENTH SESSION**

# THE KARNATAKA STATE OPEN UNIVERSITY (AMENDMENT) BILL, 2016

**(L.A. Bill No. 20 of 2016)**

A Bill further to amend the Karnataka State Open University Act, 1992.

Whereas it is expedient further to amend the Karnataka State Open University Act, 1992 (Karnataka Act 46 of 1994) for the purposes hereinafter appearing;

Be it enacted by the Karnataka State Legislature in the Sixty seventh year of the Republic of India, as follows:-

**1. Short title and commencement.-** (1) This Act may be called the Karnataka State Open University (Amendment) Act, 2016.

(2) It shall come into force at once.

**2. Amendment of section 3.-** In section 3 of the Karnataka State Open University Act, 1992 (Karnataka Act 46 of 1994), in sub-section (2), the words "and may also open centres outside Karnataka at such places as it deems fit." shall be omitted.

## STATEMENT OF OBJECTS AND REASONS

It is considered necessary to amend the Karnataka State Open Universities Act, 1992 (Karnataka Act 46 of 1994), to remove the provisions regarding opening of centers outside the state of Karnataka by the University as it contradicts the instructions issued by University Grants Commission (UGC) regarding jurisdiction of universities and the provisions of Article 245 of the Constitution, which is reiterated by the Supreme Court in Prof. Yashpal Vs. State of Chhattisgarh case.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**BASAVARAJ RAYAREDDI**
Minister for Higher Education

**S.Murthy**
Secretary (I/C)
Karnataka Legislative Assembly

## ANNEXURE

## EXTRACT FROM THE KARNATAKA STATE OPEN UNIVERSITY ACT, 1992 (KARNATAKA ACT 46 OF 1994)

**XX XX XX**

**3. Establishment and incorporation of the University.-** (1) There shall be established a University by the name of the Karnataka State Open University.

(2) The head-quarters of the University shall be at such place as may be specified by the Government by notification and it may establish, maintain or recognise colleges, Regional Centres and study centres at such places in Karnataka and may also open centres outside Karnataka at such places as it deems fit.

**XX XX XX**

Government Press, Vikasa Soudha Unit, Bengaluru 8th July 2016 P7, W.D.329, Copies 750